ಜನರು ಅಲ್ಲಿಗೆ ಹೋಗಿ ಮನೆ ಕಟ್ಟಿಸಿಕೊಂಡು ವಾಸ ಮಾಡಲು ಸಾಧ್ಯವಾಗುವುದಿಲ್ಲ. ಇದರ ಬದಲು ಊರ ಒಳಗಡೆಯೇ ಅವಕಾಶ ಮಾಡಿಕೊಟ್ಟರೆ ಈ ಜನರು ಬೇರೆ ಜನರ ಜೊತೆಯಲ್ಲಿ ಬಾಳ್ವೆ ಮಾಡಿಕೊಂಡು ಅವರ ಸಂಸ್ಕೃತಿಯನ್ನು ಸಹ ಕಲಿಯುವುದಕ್ಕೆ ಅವಕಾಶ ಸಿಗುತ್ತದೆಂದು ಹೇಳುತ್ತೇನೆ.

ಇನ್ನು ಸ್ಪೆಶಫಂಡ್ ಬಗ್ಗೆ ಹೇಳಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳಿಗೆ ೧೫೦ ರೂಪಾಯಿ ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಅವರು ಸಾಯುವವರೆಗೂ ಕೊಡುತ್ತೀರೋ ಅಥವಾ ಅವರಿಗೆ ೨೮ ವರ್ಷ ವಯಸ್ಸಾಗುವವರೆಗೆ ಮಾತ್ರ ಕೊಡುತ್ತಿರೋ? ೨೮ ವರ್ಷ ವಯಸ್ಸಾದ ಕೂಡಲೆ ಇದನ್ನು ನಿಲ್ಲಿಸಿಬಿಟ್ಟರೆ ಅವರು ಸತ್ತಂತೆ. ಆದ್ದರಿಂದ ಅವರಿಗೆ ಖಾಯಂ ಕೆಲಸ ಸಿಗುವವರೆಗೆ ಇದನ್ನು ಮುಂದುವರಿಸಿಕೊಂಡು ಹೋಗುತ್ತೀರಾ ಹೇಗೆ? ಈ ಬಗ್ಗೆ ನಿಮ್ಮ ನೀತಿಯನ್ನು ಸ್ಪಷ್ಟಪಡಿಸಬೇಕು.

ಇನ್ನು ಟ್ರಿಬ್ಯುನಲ್‌ಗಳಲ್ಲಿ ಮತ್ತು ಕಮಿಟಿಗಳಲ್ಲಿ ವಿರೋಧಪಕ್ಷದ ಸದಸ್ಯರನ್ನು ನೇಮಕ ಮಾಡು ವಂತದ್ದನ್ನು ಕಂಪಲ್ಸರಿ ಮಾಡುವುದಕ್ಕೆ ನಿಮ್ಮ ಸೌಜನ್ಯವಿರಬೇಕು. ತಾವು ಪ್ರಜಾಪ್ರಭುತ್ವವಾದಿ ಗಳೆಂದು ಹೇಳಿಕೊಳ್ಳುತ್ತೀರಿ. ಆದಕಾರಣ ಯಾವುದೇ ಸಮಿತಿ ಇರಲಿ, ಒಂದೇ ಪಕ್ಷದವರು ಅದರಲ್ಲಿದ್ದರೆ, ಬಹುಶಃ ಅಲ್ಲಿನ ಕಾರ್ಯಕ್ರಮಗಳಲ್ಲಿ ಹೆಚ್ಚು ಕಡಿಮೆಯಾಗಬಹುದು. ತಾಳಮೇಳದಲ್ಲಿ ಹೆಚ್ಚು ಕಡಿಮೆ ಯಾಗಬಹುದು. ಆದಕಾರಣ ಅಲ್ಲಿ ವಿರೋಧಪಕ್ಷದವರೂ ಇದ್ದರೆ, ಅವರೇನಾದರು ತಪ್ಪು ಮಾಡಿದರೆ ಅದನ್ನು ಎತ್ತಿತೋರಿಸುವುದಕ್ಕೆ ಅವಕಾಶವಾಗುತ್ತದೆಂಬ ದೃಷ್ಟಿಯಿಂದ ನಮ್ಮ ಕಡೆಯವರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಕೇಳುತ್ತಿದ್ದೇವೆಯೇ ಹೊರತು, ಏನೋ ನಮ್ಮ ಪಕ್ಷದ ಕಾರ್ಯಕರ್ತರಿಗೆ ಜಾಗ ಮಾಡಿಕೊಡಬೇಕೆಂಬ ದೃಷ್ಟಿಯಿಂದ ನಮ್ಮ ಘನಸರ್ಕಾರದವರನ್ನ ಕೇಳುತ್ತಿಲ್ಲ.

ಮಾನ್ಯ ಅಧ್ಯಕ್ಷರು ೩ ಸಲ ಘಂಟೆ ಬಾರಿಸಿದರು. ಆದ್ದರಿಂದ ಅವರ ಮಾತಿಗೆ ಮನ್ನಣೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Message from the Chairman L.C.
Announced

MR. SPEAKER.—I have received the following message from the Chairman, Legislative Council as follows :

"Please refer your letter of 31st March, 1978 transmitting the Karnataka Co-operative Societies (Amendment) Bill, 1978 for the concurrence of the Legislative Council.

The Bill was taken up for consideration and all the clauses of the Bill were rejected by the House during the Clause by Clause consideration on 1st April, 1978."

Now, the House will adjourn to meet again at 9 A.M. tomorrow.

The House adjourned at Fifty Minutes past Six of the Clock, to meet again at Nine of the Clock on Tuesday the 4th April 1978.